


ಸಣಕಲ ಕೊಂಬೆಯಿಂದ ಜೇನು ಇಳಿಸಿದೀನಿ ಸಾರ್... ಇದೇನು ದೊಡ್ಡ ವಿಷ್ಯ ಅಲ್ಲ' ಎಂದು ಜಡೆಯಪ್ಪ ನನ್ನ ಆತಂಕವನ್ನು ನಿವಾರಿಸಿಬಿಟ್ಟ. ಆದರೆ, ಒಂದು ವ್ಯತ್ಯಾಸ; ಕಾಡಿನಲ್ಲಿ ಜೇನು ಇಳಿಸಬೇಕಾದರೆ ಅಲ್ಲೇ ಸಿಗುವ ಉದ್ದನಾದ ಹಂಬು ಅಥವಾ ಸೊಪ್ಪೆ ಮರದ ನಾರಿನ ಹಗ್ಗ ಬಳಸುತ್ತಾರೆ. ಬುಟ್ಟಿಗಳಲ್ಲಿ ಎಲೆಗಳನ್ನು ಹರಡಿ ಕತ್ತರಿಸಿದ ಜೇನುಹುಟ್ಟುಗಳನ್ನು ಇಟ್ಟು ಕೆಳಗೆ ಇಳಿಬಿಡುತ್ತಾರೆ. ಆದರೆ, ನಾವು ತೆಳುವಾದ ಪ್ಲಾಸ್ಟಿಕ್ ಹಗ್ಗ ಮತ್ತು ಬಕೆಟ್‌ಗಳನ್ನು ಕೊಡಬೇಕು ಎಂದಾಯಿತು. ಸಕಲ ಸಿದ್ಧತೆಗಳೊಡನೆ ನಮ್ಮ ವಿಡಿಯೊಗ್ರಾಹಕರೂ ಸಿದ್ಧರಾದರು. ಆದರೆ, ನನಗೆ ಒಂದು ಅಳುಕು. ಬೆಂಕಿ ಹೊಗೆಗೆ ಲಕ್ಷಾಂತರ ಜೇನುಗಳು ಒಮ್ಮೆಗೇ ಸಿಟ್ಟಿಗೆದ್ದು ಹಾರಿಬಂದು ನಮ್ಮ ವಿಡಿಯೊ ಗ್ರಾಹಕರಿಗೆಲ್ಲ ಗ್ರಹಚಾರ ಬಿಡಿಸಿದರೆ ಏನು ಗತಿ? ನಾನಂತು ಸನಿಹವೇ ಇದ್ದ ನನ್ನ ಮನೆಯ ಅಂಗಳದಲ್ಲಿ ಕುಳಿತು ಇದನ್ನೆಲ್ಲ ವೀಕ್ಷಿಸುವುದು, ಸಿಟ್ಟಿಗೆದ್ದ ಜೇನುಹುಳುಗಳು ಗೂಡು ಬಿಟ್ಟು ಹಾರಿದ ಕೂಡಲೇ ಮನೆಯೊಳಗೆ ನುಗ್ಗಿ ಬಾಗಿಲು ಹಾಕಿಕೊಳ್ಳುವುದು ಎಂದು ನಿರ್ಧರಿಸಿದ್ದೆ. ಆದರೆ, ನಮ್ಮ ಹುಡುಗರು ಧೈರ್ಯವಂತರು. 'ಗೂಡಿಗೇ ಮುಖಕೊಟ್ಟು ಮರದ್ ಮ್ಯಾಲೇ ತೂಗಾಡೋ ಜಡೆಯಪ್ಪನಿಗೇ ಏನೂ ಆಗಲ್ಲ ಅಂದ್ಮೇಲೆ ನಾವು ಕೆಳಗಿರ್ತೀವಲ್ಲಣ್ಣ, ನೀವು ಚಿಂತೆ ಮಾಡ್ಬೇಡಿ, ನಮಗೇನೂ ಆಗಲ್ಲ' ಎಂದು ನನಗೇ ಸಮಾಧಾನ ಹೇಳಿದರು. ಜಡೆಯಪ್ಪನನ್ನು ಕೇಳಿದರೆ, 'ಸುತ್ತ ಸ್ವಲ್ಪ ಬೆಂಕಿಹಾಕೋಣ ಸಾ... ಜೇನುಹುಳುಗಳು ಮ್ಯಾಲೇನೇ ಹಾರಿ ಹೋಗ್ತಾವೆ. ಕೆಳಗ್ ಬರೋದೆ ಇಲ್ಲ' ಎಂದು ಸಮಾಧಾನ ಮಾಡಿದ. ಮತ್ತೊಂದು ಅಳುಕು: ಪಕ್ಕದ